


ಅರುಣಾ ಕೆ.ಆರ್.

ಕಲೆ: ಬಸವರಾಜಾಚಾರ್ ಕೆ.ಆರ್.

# ಆ ಮರ...

ಮೂರ್ನಾಲ್ಕು ವರ್ಷಕ್ಕೊಮ್ಮೆ ಬಾಡಿಗೆ ಮನೆ ಬದಲಾವಣೆ, ಸಾಮಾನು ಸಾಗಿಸುವುದು, ಮಕ್ಕಳ ಶಾಲೆ ಬದಲಾವಣೆ. ಇದರೊಂದಿಗೆ ಹೊಸದಾಗಿ ಹೋದ ಮನೆಗೆ, ಆ ಬಡಾವಣೆಯ ವಾತಾವರಣಕ್ಕೆ, ನೆರೆಹೊರೆಯವರಿಗೆ, ಮುಖ್ಯವಾಗಿ ಮನೆಯ ಮಾಲೀಕರಿಗೆ ಹೊಂದಿಕೊಂಡು ಹೋಗುತ್ತಾ ಸುಮಾರು ಹನ್ನೆರಡು ವರ್ಷಗಳೇ ಕಳೆದಿದ್ದವು. ದೊಡ್ಡ ನಗರದಲ್ಲಿ ಮಧ್ಯಮ ವರ್ಗದವರು ಸೈಟೊಂದನ್ನು ಕೊಂಡು ಮನೆ ಕಟ್ಟಿಸುವ ಆ ಕಷ್ಟದ ಅನುಭವ ಸ್ವಂತ ಮನೆ ಇರುವವರಿಗೆ ಇದ್ದೇ ಇರುತ್ತದೆ. ಏನೇ ಆಗಲಿ, ನಮ್ಮದೇ ಮನೆ ಕಟ್ಟಿಕೊಳ್ಳುವ ಕನಸು ಎಷ್ಟು ವರ್ಷದಿಂದ ಇತ್ತು! ಅಂತೂ ಮುಹೂರ್ತ ಕೂಡಿ ಬಂತು. ನನ್ನವರ ಸಹೋದ್ಯೋಗಿ ತಮ್ಮ ಬಡಾವಣೆಯಲ್ಲಿರುವ ಸೈಟ್‌ಗಳನ್ನು ಬಂದು ನೋಡಿ ಎಂದಾಗ ಸೈಟ್ ನೋಡಲು ಹೋದೆವು. ಬೆಳಗಾಗುತ್ತಿದ್ದಂತೆ ಸೂರ್ಯನ ಕಿರಣಗಳು ಮನೆ ಬಾಗಿಲಿನ ಮೂಲಕ ಒಳಪ್ರವೇಶಿಸಿದರೆ ಒಳ್ಳೆಯದೆಂಬ ಉದ್ದೇಶದಿಂದ